ದಿನಾಂಕ: 04.04.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರಿ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಬಿ.ಎಸ್.ವೈ ಅವರಿಂದ**

1. ಮರದೂರು ಗ್ರಾಮದ ಸರ್ವೇ ನಂ.112/1ರ ಪಹಣಿ ಪತ್ರಿಕೆ ಹಾಗೂ ಸರ್ವೇ ನಂ. 132/3 ಯನ್ನು ಸಾಕ್ಷಿಗೆ ತೋರಿಸಿ ಸರ್ವೇ ನಂ.112/1 ನನ್ನ ಹೆಸರಿನಲ್ಲಿ ಹಾಗೂ ಸರ್ವೇ ನಂ.132/3 ನನ್ನ ತಾಯಿಯ ಹೆಸರಿನಲ್ಲಿವೆ ಎಂದರೆ ಹೌದು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಪಹಣಿ ಪತ್ರಿಕೆಗಳು ನಿಡಿ.3 ಹಾಗೂ 4 ಎಂದು ಗುರುತಿಸಲಾಯಿತು.

2. ನಾನು ವಾಸವಾಗಿರುವ ಮನೆ, ಖಾತಾ ನಂ.60 ಅನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಮರದೂರು ಗ್ರಾಮದ ಖಾತಾ ನಂ.19 ಮನೆಯನ್ನು ಕುಬೇರಗೌಡ ಎಂಬುವವರಿಗೆ ಮಾರಾಟ ಮಾಡಿದ್ದು, ಅದನ್ನು ಕೂಡ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. 13 x13 ರ ಒಟ್ಟು 2 ಬ್ಯಾರೇನ್‌ಗಳು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಅವು ಒಟ್ಟು ಕುಟುಂಬದ ಆಸ್ತಿಗಳಾದ್ದರಿಂದ ಅವುಗಳನ್ನು ಸೇರಿಸುವ ಅವಶ್ಯಕತೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ದಾವೆಯಲ್ಲಿ ಸೇರಿಸದೆ ಇದ್ದುದರಿಂದ ನಮ್ಮ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

3. ನನ್ನ ಪರವಾಗಿ ದಶರಥ ಹಾಗೂ ನಾಗರಾಜೇ ಗೌಡ ಎಂಬುವವರನ್ನು ಸಾಕ್ಷಿದಾರರನ್ನಾಗಿ ಸೇರಿಸಿರುತ್ತೇನೆ. ದಶರಥ ಎಂಬುವವರ ನಮ್ಮ ಅಜ್ಜಿ ಸುಬ್ಬಮ್ಮ ಇವರ ತಂಗಿ ಮಗ, ಸದರಿಯವರು ಕೆ.ಆರ್. ನಗರ ತಾ ತಿಪಟೂಟು ಗ್ರಾಮದವರು. ನಾಗರಾಜೇ ಗೌಡ ಎಂಬುವವರು ದೊಡ್ಡೇಗೌಡನ ಕೊಪ್ಪಲಿಗೆ ದತ್ತು ಹೋಗಿರುತ್ತಾರೆ, ಸದರಿಯವರು ನನ್ನ ಸೋದರ ಮಾವನಾಗಬೇಕು.

4. ಹೊಸೂರು ಗ್ರಾಮದವರನ್ನು ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇಲ್ಲ. ಸದರಿ ಗ್ರಾಮದವರನ್ನು ಸಾಕ್ಷಿ ಮಾಡಿಸಿದರೆ ತೊಂದರೆ ಆಗುತ್ತದೆ ಎಂದು ಬೇರೆ ಗ್ರಾಮದವರನ್ನು ಸಾಕ್ಷಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಹೊಗೆಸೊಪ್ಪು ಬೆಳೆಯುತ್ತಿದ್ದೇವೆ ಎಂದರೆ ನಾವು ಹೊಗೆಸೊಪ್ಪನ್ನು ಒಟ್ಟು ಕುಟುಂಬದಲ್ಲಿ ಬೆಳೆಯುತ್ತಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ನಾವು ಒಟ್ಟು ಕುಟುಂಬದಲ್ಲಿ ಬೆಳೆಯುತ್ತಿದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾವು ಸಲ್ಲಿಸಿರುವ ದಾಖಲಾತಿಗಳಲ್ಲಿ ಒಟ್ಟು ಕುಟುಂಬ ಎಂದು ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ನನ್ನ ಹೆಸರಿನಲ್ಲಿರುವ ದಾಖಲಾತಿಗಳನ್ನು ಸೇರಿಸಿಲ್ಲ ಎಂದರೆ ಅದರ ಅವಶ್ಯಕತೆ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅವುಗಳು ನಾನು ಹಿಂದೆ ಮಾರಾಟ ಮಾಡಿರುವ ಆಸ್ತಿಗಳ ದಾಖಲೆಗಳು ಎಂದು ಸಾಕ್ಷಿ ನುಡಿಯುತ್ತಾರೆ.

5. ದಾವಾ ಸ್ವತ್ತುಗಳು ಪ್ರತಿವಾದಿಯರ ಹೆಸರಿನಲ್ಲಿರುವ ಖಾತೆಯನ್ನು ನಾನು ಈವರೆಗೂ ಪ್ರಶ್ನಿಸಿರುವುದಿಲ್ಲ ಏಕೆಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಎಲ್ಲಾ ಗೊತ್ತಿದ್ದರು ಕೂಡ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಹೆಸರಿನಲ್ಲಿರುವ ಯಾವುದೇ ಖಾತೆಯನ್ನು ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಈ ಬಗ್ಗೆ ನನಗೆ ಗೊತ್ತಿರಲಿಲ್ಲ. ಪ್ರತಿವಾದಿಯರು ನನಗೆ ಗೊತ್ತಿಲ್ಲದೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

6. ಸರ್ವೇ ನಂ.159/4ರ ದಾಖಲಾತಿಯನ್ನು ನಾನು ಹಾಜರುಪಡಿಸಿದ್ದು, ಅದು ಯಾರ ಹೆಸರಿನಲ್ಲಿದೆ ನನಗೆ ನೆನಪಿಲ್ಲ. ಅದೇ ರೀತಿ ನಿಪಿ.61 ಸರ್ವೇ ನಂ.18 ಆರ್.ಟಿ.ಸಿ ನಾನು ಹಾಜರುಪಡಿಸಿದ್ದು, ಅದು ಯಾರ ಹೆಸರಿನಲ್ಲಿದೆ ನನಗೆ ನೆನಪಿಲ್ಲ. ಅದು ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಸರ್ವೇ ನಂ.18 ನಾಗಮ್ಮ, ವೆಂಕಟೇಶ್ ಗೌಡ,

ಮಲ್ಲೇಗೌಡ, ಇವರ ಹೆಸರಿನಲ್ಲಿದ್ದು, ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾಗಮ್ಮ, ವೆಂಕಟೇಶ್ ಗೌಡ ಅವರು ಈಗ ತೀರಿಹೋಗಿರುವುದರಿಂದ ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿದ್ದೇವೆ. ನಾನು ಹಾಜರುಪಡಿಸಿರುವ ದಾಖಲಾತಿಗಳು ನನಗೆ ಸಂಬಂಧವಿಲ್ಲ, ಅವು ಪ್ರತಿವಾದಿಯರ ದಾಖಲಾತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಮಾರಾಟ ಮಾಡಿರುವ ಆಸ್ತಿಗಳನ್ನು ಪ್ರಸ್ತುತ ದಾವೆಯಲ್ಲಿ ಸೇರಿಸದೇ, ಪ್ರತಿವಾದಿಯರ ಹೆಸರಿನಲ್ಲಿರುವ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸತ್ಯವನ್ನು ಮರೆಮಾಚಿ ಪ್ರಸ್ತುತ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ನೀಡಿರುವ ನೋಟೀಸ್ಗೆ ಸೂಕ್ತ ಹಾಗೂ ಸಮಂಜಸ ಉತ್ತರ ನೀಡಿರುತ್ತಾರೆ ಎಂದರೆ ಸರಿಯಲ್ಲ.ಪ್ರತಿವಾದಿಯರು ನೋಟೀಸ್ಗೆ ಸೂಕ್ತ ಹಾಗೂ ಸಮಂಜಸ ಉತ್ತರ ನೀಡಿದ್ದರು ಕೂಡ ಅದನ್ನು ಉದ್ದೇಶಪೂರ್ವಕ ನನ್ನ ವಾದಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ದಾವೆಯ ಎಲ್ಲಾ ಪ್ರತಿವಾದಿಯರಿಗೆ ನೋಟೀಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

7. ನಿ.ಪಿ.64 ನೋಟೀಸ್ ಪ್ರತಿ ಸಾಕ್ಷಿಗೆ ತೋರಿಸಿ ಸದರಿ ನೋಟೀಸ್ ಅನ್ನು 1. ಕೆಂಪರಾಜೇಗೌಡ ಬಿನ್ ಲೇಟ್ ಶಿವಣ್ಣ 2. ರಾಜಕುಮಾರ ಬಿನ್ ಲೇಟ್ ಶಿವಣ್ಣ 3. ಈರೇಗೌಡ ಬಿನ್ ಚಂದ್ರೇಗೌಡ 4. ದೇವರಾಜೇಗೌಡ ಬಿನ್ ಚಂದ್ರೇಗೌಡ 5. ರಾಮೇಗೌಡ ರವರಿಗೆ ಮಾತ್ರ ನೀಡಲಾಗಿದೆ ಎಂದು ಸಾಕ್ಷಿ ನುಡಿದಿದ್ದು, ಉಳಿದ 3 ಜನರಾದ ಕೌಶಲ್ಯ, ರೇವಣ್ಣ, ಮಲ್ಲೇಶ್ ಕೂಡ ನಾವು ನೋಟೀಸ್ ನೀಡಿರುತ್ತೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದರೆ ಆ ಬಗ್ಗೆ ನನ್ನ ಬಳಿ ಅಂಚೆ ಸ್ವೀಕೃತಿ ಪ್ರತಿಗಳು ಇವೆ ಎಂದು ಸಾಕ್ಷಿ ನುಡಿಯುತ್ತಾರೆ.

8. ಪ್ರಸ್ತುತ ದಾವೆಯನ್ನು 8 ಜನರ ವಿರುದ್ಧ ಸಲ್ಲಿಸಿರುತ್ತೇನೆ. 8 ಜನಕ್ಕಿಂತ ಜಾಸ್ತಿ ಪ್ರತಿವಾದಿಗಳಿದ್ದರೆ ಅದು ಸುಳ್ಳಾ ಎಂಬ ಪ್ರಶ್ನೆಗೆ ಅದೇಕೆ ಸುಳ್ಳಾಗುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ನಾನು ಯಾರ ಮೇಲೆ ಸಲ್ಲಿಸಿರುತ್ತೇನೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದೆ ಎಷ್ಟು ಜನರ ಮೇಲೆ ದಾವೆ ಹೂಡಿದ್ದೇನೆ ಗೊತ್ತಿಲ್ಲದಿದ್ದರು ಕೂಡ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಾನು ಸೇರಿಸದೆ ಇರುವ ಆಸ್ತಿಗಳನ್ನು ಪ್ರಸ್ತುತ ದಾವೆಯಲ್ಲಿ ಸಸೇರಿಸಿದರೆ ನನ್ನ ಹೆಸರಿನಲ್ಲಿ ಹೆಚ್ಚಿನ ಆಸ್ತಿಗಳು ಇರುವುದು ಕಂಡುಬರುತ್ತದೆಂದು ಅವುಗಳನ್ನು ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿದಾರರಿಗೆ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ವಾದಿಪರ ವಕೀಲರಿಗೆ ನೀಡಿರುವ ದಿಃ 01.07.2020 ರ ಪ್ರತ್ಯುತ್ತರ ತೋರಿಸಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆ ನಿಡಿ.5, ಅಂಚೆ ರಶೀದಿ ನಿಡಿ.6, ಅಂಚೆ ಸ್ವೀಕೃತಿ ಪತ್ರ ನಿಡಿ.7 ಎಂದು ಗುರುತಿಸಲಾಯಿತು. ಎಲ್ಲಾ ಸತ್ಯವನ್ನು ಬಚ್ಚಿಟ್ಟು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನಾರಿ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.